ನಿಮ್ಮೊಡನೆ

# ಕನ್ನಡವೆನೆ ಕುಣಿದಾಡುವುದೆನ್ನೆದೆ..

**ಕನ್ನಡ ಮಾತನಾಡುವವರ ಜನಸಂಖ್ಯೆಯು ಮುಂದಿನ 30 ವರ್ಷಗಳಲ್ಲಿ ಜರ್ಮನಿ, ಫ್ರೆಂಚ್ ಮತ್ತು ರಷ್ಯನ್ ಭಾಷೆಗಳನ್ನು ಮಾತನಾಡುವವರ ಸಂಖ್ಯೆಗಿಂತಲೂ ಹೆಚ್ಚಾಗಲಿದೆ ಎಂದು ಜಾಗತಿಕ ಸಮೀಕ್ಷೆಯೊಂದು ಹೇಳಿದೆ.**

ಕನ್ನಡಿಗರು ಖುಷಿ ಪಡುವಂತಹ ಸುದ್ದಿಯೊಂದು ಬಂದಿದೆ. ‘ಮುಂದಿನ 30 ವರ್ಷಗಳಲ್ಲಿ ಜಗತ್ತಿನಲ್ಲಿ ಅತ್ಯಂತ ಜನಪ್ರಿಯವಾಗಿ ಉಳಿದುಕೊಳ್ಳಲಿರುವ 20 ಭಾರತೀಯ ಭಾಷೆಗಳಲ್ಲಿ ಕನ್ನಡವೂ ಒಂದಾಗಿರಲಿದೆ’ ಎನ್ನುವುದೇ ಆ ಸಂತಸದ ಸುದ್ದಿ. ‘ಭಾರತದ ಜನರ ಭಾಷಿಕ ಸಮೀಕ್ಷೆ’ಯ ಮುಖ್ಯಸ್ಥರಾದ ಪ್ರೊ.ಜಿ.ಎನ್.ದೇವಿ ಅವರೇ ಈ ಸುದ್ದಿಯನ್ನು ಬಹಿರಂಗಪಡಿಸಿರುವುದರಿಂದ ಕನ್ನಡಿಗರು ಆಶಾವಾದಿಗಳಾಗಬಹುದು. ಕಳೆದ 17 ವರ್ಷಗಳಲ್ಲಿ ದೇಶಾದ್ಯಂತ 780 ಭಾಷೆಗಳು ಮತ್ತು 66 ಲಿಪಿಗಳನ್ನು ಅಧ್ಯಯನ ಮಾಡಿದ ಬಳಿಕ ಸಮೀಕ್ಷಾ ತಂಡ ಈ ತೀರ್ಮಾನಕ್ಕೆ ಬಂದಿದೆ. ‘ಕನ್ನಡ ಮಾತನಾಡುವವರ ಜನಸಂಖ್ಯೆಯು ಮುಂದಿನ 30 ವರ್ಷಗಳಲ್ಲಿ ಜರ್ಮನಿ, ಫ್ರೆಂಚ್ ಮತ್ತು ರಷ್ಯನ್ ಭಾಷೆಗಳನ್ನು ಮಾತನಾಡುವವರ ಸಂಖ್ಯೆಗಿಂತಲೂ ಹೆಚ್ಚಿರಲಿದೆ’ ಎಂದೂ ಸಮೀಕ್ಷೆ ಹೇಳಿರುವ ಹಿನ್ನೆಲೆಯಲ್ಲಿ ನಾವು ‘ಕನ್ನಡವೆನೆ ಕುಣಿದಾಡುವುದೆನ್ನೆದೆ’ ಎಂದು ಕುಣಿಯಲಡ್ಡಿಯಿಲ್ಲ.

ನಮ್ಮ ಕನ್ನಡಪ್ರೇಮ ಎರಡು ಬಗೆಯದು. ಮೊದಲನೆಯದ್ದು ಕನ್ನಡದ ರಕ್ಷಣೆಯ ಹೆಸರಿನಲ್ಲಿ ನಡೆಯುವ ಉಕ್ಕೇರಿದ ಉತ್ಸಾಹದ ಹೋರಾಟ ಮತ್ತು ವೇದಿಕೆಯ ಸಂಭ್ರಮ. ಇನ್ನೊಂದು ಸದ್ದಿಲ್ಲದೆ ನಡೆಯುವ ಸಂಶೋಧನೆ ಮತ್ತು ಸಾಹಿತ್ಯ ಸೇವೆ. ಭಾಷೆಯೊಂದು ತನ್ನ ಅಸ್ಮಿತೆಯನ್ನು ಉಳಿಸಿಕೊಂಡು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಬೆಳೆಯುತ್ತಾ ಹೋಗಬೇಕೆಂದರೆ ಈ ಎರಡೂ ಬಗೆಯ ಭಾಷಾಪ್ರೇಮ ಇರಲೇಬೇಕು. ಕನ್ನಡಿಗರ ಮಟ್ಟಿಗೆ ಮೊದಲ ಬಗೆಯ ಹೋರಾಟದ ಭಾಷಾಪ್ರೇಮ ಎಷ್ಟೋ ಸಲ ‘ವ್ಯಾಪಾರಿ’ತನದ್ದು ಅಥವಾ ಪೈಪೋಟಿಯದ್ದು ಅನ್ನಿಸಿದರೂ, ನಾಡುನುಡಿಯ ರಕ್ಷಣೆಯಲ್ಲಿ ಅದಕ್ಕೂ ಅದರದ್ದೇ ಆದ ಮಹತ್ವವಿದೆ. ಅದಕ್ಕಿಂತ ಮುಖ್ಯವಾದದ್ದು ಸಂಶೋಧನೆ ಮತ್ತು ಸಾಹಿತ್ಯದ ಮೂಲಕ ಭಾಷೆಯನ್ನು ಬೆಳೆಸುವುದು. ‘ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಪೂರಕವಾಗಿ ಇರುವ ಇತರ ಮಾತೃಭಾಷೆಗಳ ಜನರು ಕನ್ನಡದ ವ್ಯಾಪಕ ಬಳಕೆಯನ್ನು ನಡೆಸುತ್ತಿರುವುದು ಕನ್ನಡದ ಜೀವಂತಿಕೆಯನ್ನು ವೃದ್ಧಿಸಿದೆ’ ಎಂದೂ ಈ ಸಮೀಕ್ಷೆ ಗುರುತಿಸಿದೆ. ಕರ್ನಾಟಕದಲ್ಲಿ ಇರುವ ಕರ್ನಾಟಕದ್ದೇ ಆದ ತುಳು, ಕೊಂಕಣಿ, ಬ್ಯಾರಿ, ಕೊಡವ, ನವಾಯಿತಿ, ಕೊರಗ, ಬಡಗ, ಯೆರವ, ಇರುಳ, ಸೋಲಿಗ, ಗೌಳಿ, ಬೆಟ್ಟಕುರುಬ, ಜೇನು ಕುರುಬ– ಮುಂತಾದ ಹಲವಾರು ಭಾಷೆಗಳ ಜನರು ತಮ್ಮ ಮಾತೃಭಾಷೆಯ ಜತೆಗೆ ಕನ್ನಡವನ್ನು ಸಮಾನವಾಗಿ ಉಪಯೋಗಿಸುತ್ತಿರುವುದು ಕರ್ನಾಟಕದ ಮಟ್ಟಿಗೆ ಹೆಗ್ಗಳಿಕೆಯೇ ಸರಿ. ಈ ಮಾತೃಭಾಷಾ ಪ್ರೇಮ ಇನ್ನೊಂದೆಡೆ ಇಂಗ್ಲಿಷಿನ ದಾಳಿಯನ್ನು ಸಮರ್ಥವಾಗಿ ಎದುರಿಸಲೂ ನೆರವಾಗುತ್ತಿದೆ. ಜತೆಗೆ ತಮಿಳು, ತೆಲುಗು ಮಾತೃಭಾಷೆಯಾಗುಳ್ಳ ಕನ್ನಡಿಗರೂ ಕನ್ನಡದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡುತ್ತಿದ್ದಾರೆ. ಹೀಗಾಗಿ ನಮ್ಮ ಭಾಷಾ ಸಮೃದ್ಧತೆ, ಕನ್ನಡದ ಅಭಿವೃದ್ಧಿಗೆ ಸಾವಯವ ಗೊಬ್ಬರವಾಗಿ ಬಳಕೆಯಾಗಿದೆ.

ಕನ್ನಡ ಸಾಹಿತಿಗಳ ಮೇರು ಸಾಧನೆ ಕನ್ನಡದ ಜೀವಂತಿಕೆಯನ್ನು ವೃದ್ಧಿಸುವಲ್ಲಿ ಮಹತ್ವದ ಪಾತ್ರ ವಹಿಸಿದ ಇನ್ನೊಂದು ಅಂಶ ಎಂದು ಸಮೀಕ್ಷೆ ಗುರುತಿಸಿದೆ. ಭಾರತೀಯ ಭಾಷೆಗಳಲ್ಲೇ ಅತ್ಯಧಿಕ ಸಂಖ್ಯೆಯ ಜ್ಞಾನಪೀಠ ಪ್ರಶಸ್ತಿಗಳನ್ನು ಗಳಿಸಿರುವ ಕನ್ನಡದ ಸಾಹಿತಿಗಳು, ತಮ್ಮ ಸೃಜನಶೀಲ ಕೃತಿಗಳ ಮೂಲಕ ಜನಮಾನಸದಲ್ಲಿ ಭಾಷಾಪ್ರೇಮ ಹೆಚ್ಚಾಗಲು ಕಾರಣರಾಗಿದ್ದಾರೆ. ಕಥಾಸಾಹಿತ್ಯ ಮತ್ತು ಕಾವ್ಯ ಮಾತ್ರವಲ್ಲದೆ, ತತ್ವಜ್ಞಾನದ ಪ್ರಕಾರದಲ್ಲಿ ಸಾಹಿತ್ಯಕೃಷಿ ಮಾಡಿದ್ದಕ್ಕೂ ಜ್ಞಾನಪೀಠ ಸಿಕ್ಕಿರುವುದು ಕನ್ನಡದ ಹೆಗ್ಗಳಿಕೆ. ಜ್ಞಾನಪೀಠ ಸಿಗದೆಯೂ ಕನ್ನಡ ಸಾಹಿತ್ಯದ ಮೌಲ್ಯವನ್ನು ಮತ್ತು ಓದುಗ ವ್ಯಾಪ್ತಿಯನ್ನು ಅಪಾರವಾಗಿ ಹಿಗ್ಗಿಸಿರುವ ಡಿವಿಜಿ, ಲಂಕೇಶ್, ತೇಜಸ್ವಿ, ದೇವನೂರು ಮುಂತಾದ ನಮ್ಮ ಸಾಹಿತಿಗಳ ಪಟ್ಟಿಯೂ ದೊಡ್ಡದಿದೆ.

ಇಷ್ಟಾಗಿಯೂ ಕನ್ನಡವು ರಾಜ್ಯದ ‘ಅನ್ನದ ಭಾಷೆ’ಯಾಗುವ ಪ್ರಕ್ರಿಯೆ ವೇಗ ಪಡೆದುಕೊಂಡಿಲ್ಲ. ಆ ಮಟ್ಟಿಗೆ ಇಂಗ್ಲಿಷಿನ ಕಿರಿಕಿರಿ ಸಾಕಷ್ಟಿದೆ. ಜತೆಗೆ ಕೊರಗ, ಬಡಗ, ಯೆರವ, ಇರುಳ, ಸೋಲಿಗ, ಜೇನು ಕುರುಬ ಮುಂತಾದ ಭಾಷೆಗಳು ಅಳಿವಿನ ಅಂಚಿನಲ್ಲಿವೆ ಎನ್ನುವುದೂ ನಿಜ. ಆರ್ಥಿಕ, ಸಾಮಾಜಿಕವಾಗಿ ಅಂಚಿಗೆ ತಳ್ಳಲ್ಪಟ್ಟಿರುವ ಈ ಭಾಷಿಕ ಜನಾಂಗಗಳು ತಮ್ಮ ಭಾಷೆಯನ್ನು ತಾವೇ ಉಳಿಸಿಕೊಳ್ಳುವುದೆಂದರೆ, ಅವರು ಇನ್ನೂ ಹಿಂದುಳಿದವರಾಗಿ ಇರುವುದೆಂದೇ ಅರ್ಥ. ಈ ಹಿನ್ನೆಲೆಯಲ್ಲಿ ಈ ಭಾಷೆಗಳ ಉಳಿವಿಗೆ ಉಳಿದವರೂ ಶ್ರಮಿಸುವ ಅಗತ್ಯವಿದೆ. ಭಾಷಾ ವಿದ್ವಾಂಸರು ಈ ನಿಟ್ಟಿನಲ್ಲಿ ಹೊಸ ಕಾರ್ಯಯೋಜನೆಗಳನ್ನು ರೂಪಿಸಬೇಕಿದೆ. ವಿಶ್ವವಿದ್ಯಾನಿಲಯಗಳು ಕ್ಷೇತ್ರಕಾರ್ಯಗಳನ್ನು ನಡೆಸುವ ಮೂಲಕ, ಈ ಭಾಷೆಗಳ ಅಧ್ಯಯನ ಮತ್ತು ಜೀವಂತಿಕೆಯನ್ನು ಹೆಚ್ಚಿಸುವ ಕಾರ್ಯ ನಿರ್ವಹಿಸಬೇಕಿದೆ.

■ **ಬಿ.ಎಂ.ಹನೀಫ್**



ಈಶ್ವರ್